# ಎನ್‌ಐಟಿಕೆಯಲ್ಲಿ ಹಳೆ ವಿದ್ಯಾರ್ಥಿಗಳ ಜಾಗತಿಕ ಸಮಾವೇಶ



**ಸುರತ್ಕಲ್, ಡಿ. 23:** ಎನ್‌ಐಟಿಕೆಯ ಕ್ಯಾಂಪಸ್‌ನಲ್ಲಿ ವಜ್ರ ಮಹೋತ್ಸವದ ಅಂಗವಾಗಿ ಎನ್‌ಐಟಿಕೆಯಲ್ಲಿ ಶಿಕ್ಷಣ ಪೂರೈಸಿದ ಹಳೆ ವಿದ್ಯಾರ್ಥಿಗಳ ಎರಡು ದಿನಗಳ ಜಾಗತಿಕ ಸಮಾವೇಶ ಹಾಗೂ ಅವರ ಕಂಪೆನಿಗಳ ಉತ್ಪನ್ನಗಳ ಪ್ರದರ್ಶನ ಶುಕ್ರವಾರ ಆರಂಭಗೊಂಡಿತು.

ಸಭಾ ಕಾರ್ಯಕ್ರಮಕ್ಕೆ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಪ್ರೊ| ತ್ರಿಲೋಚನ್ ಶಾಸ್ತ್ರಿ ಚಾಲನೆ ನೀಡಿ, ಯಾವುದೇ ಒಂದು ಸಂಸ್ಥೆ ಬೆಳವಣಿಗೆ ಹೊಂದ ಬೇಕಾ ದರೆ ಆ ಸಂಸ್ಥೆಯಲ್ಲಿ ಶಿಕ್ಷಣ ಕಲಿತು ಕೃತಾರ್ಥ ರಾದವರ ಸಹಾಯ, ಪ್ರೋತ್ಸಾಹ ಇದ್ದಾಗ ಮತ್ತಷ್ಟು ಪ್ರತಿಭಾ ಸಂಪನ್ನರನ್ನು ದೇಶಕ್ಕೆ ಕೊಡುಗೆ ಯಾಗಿ ನೀಡಲು ಸಾಧ್ಯ ಎಂದರು.

ದಿಕ್ಸೂಚಿ ಭಾಷಣ ಮಾಡಿದ ಎನ್ ಐಟಿಕೆ ಹಳೆ ವಿದ್ಯಾರ್ಥಿ ಜಾಗತಿಕ ಸಂಘದ ಅಧ್ಯಕ್ಷ ಕೀರ್ತಿರಾಜ್ ಸಾಲ್ಯಾನ್ ದಿಕ್ಸೂಚಿ ಭಾಷಣಗೈದರು.

ಎನ್‌ಐಟಿಕೆ ಪ್ರಭಾರ ನಿರ್ದೇಶಕ ಪ್ರೊ| ಪ್ರಸಾದ್ ಕೃಷ್ಣ ಅವರು ಹಳೆ ವಿದ್ಯಾರ್ಥಿಗಳ ಕೊಡುಗೆಯಲ್ಲಿ ಎನ್ ಐಟಿಕೆ ಮುಂಚೂಣಿಯಲ್ಲಿದೆ. ಇಂತಹ ತಂಡ ವಿದ್ದಲ್ಲಿ ಸಂಸ್ಥೆಯು ಮತ್ತಷ್ಟು ಉನ್ನತ ಸ್ಥಾನ ಪಡಯಲಿದೆ ಹಾಗೂ ವಿದ್ಯಾರ್ಥಿ ಸಮೂಹಕ್ಕೆ ಹೆಚ್ಚಿನ ಪ್ರಯೋಜನವಾಗಲಿದೆ ಎಂದರು. ಎನ್‌ಐಟಿಕೆ ರಿಜಿಸ್ಟ್ರಾರ್ ರವೀಂದ್ರ, ಪ್ರೊ| ವಿಜಯ್ ದೇಸಾಯ್, ಹಳೆ ವಿದ್ಯಾರ್ಥಿ ಜಾಗತಿಕ ಸಂಘದ ಪ್ರಮುಖರಾದ ಎಸ್. ಆರ್. ಬಾಲಾ, ವಿ.ಬಿ. ಪರ್ವತಿಕರ್, ಪ್ರೊ| ಬಲವೀರ ರೆಡ್ಡಿ, ನಿಕಟಪೂರ್ವ ಪ್ರಭಾರ ನಿರ್ದೇಶಕ ಪ್ರೊ| ಉದಯಕುಮಾರ್ ಆರ್. ಯೆರಗಟ್ಟಿ, ದೇಶ ವಿದೇಶಗಳಿಂದ ಆಗಮಿಸಿದ ಹಳೆ ವಿದ್ಯಾರ್ಥಿ ಸಂಘದ ವಿವಿಧ ಘಟಕಗಳ ಪ್ರಮುಖರು ಮತ್ತಿತರರು ಉಪಸ್ಥಿತರಿದ್ದರು. ವಿವಿಧ ಘಟಕಗಳ ಪ್ರಮುಖರನ್ನು ಗೌರವಿಸಲಾಯಿತು.

ಹಳೆಯ ವಿದ್ಯಾರ್ಥಿಗಳ ಉದ್ಯಮ ಸಂಸ್ಥೆಗಳ ಉಪಕರಣ, ಡ್ರೋನ್ ವ್ಯವಸ್ಥೆ ಮತ್ತಿತರ ಉಪಕರಣಗಳ ಪ್ರದರ್ಶನ, ಸಿಆರ್‌ಎಫ್, ಸಿಎಸ್‌ಡಿ, ಜೈವಿಕ ಮರು ಬಳಕೆ ಘಟಕದ ಮಾಹಿತಿ, ಎನ್‌ಐಟಿಕೆ ವಿನ್ಯಾಸಗೊಳಿಸಿದ ಡರ್ಟ್ ಇ ಬೈಕ್ ಅನಾವರಣ ನಡೆಯಿತು.

Udayavani, Date: 24/12/22, p. no - Sudin -02